ಅಜೀಂ ಪ್ರೇಮ್‌ಜಿ ವಿ.ವಿ ಹಾಗೂ ಶಿಕ್ಷಣ ಇಲಾಖೆ ಸಹಭಾಗಿತ್ವ

# ಸಾಹಿತ್ಯ ಉತ್ಸವ: ಮಕ್ಕಳಿಂದ ಕಥಾವಾಚನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಹಾಗೂ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ನಗರದಲ್ಲಿ ಆಯೋಜಿಸಿರುವ ನಾಲ್ಕನೆಯ ಆವೃತ್ತಿಯ 'ಕಥಾವನ ಮಕ್ಕಳ ಸಾಹಿತ್ಯ ಉತ್ಸವ-2015'ರ ಎರಡನೇ ದಿನವಾದ ಗುರುವಾರ ಶಾಲಾ ಮಕ್ಕಳಿಗಾಗಿ ಕಥೆ ಓದುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸರ್ಜಾಪುರದ ಬಾಲಕಿಯರ ಮಾದರಿ ಪ್ರಾಥಮಿಕ ಶಾಲೆಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಕಥೆಗಳನ್ನು ಓದಿದರು. ಜೊತೆಗೇ ಶಿಕ್ಷಕರು ಮಕ್ಕಳಿಗೆ ಕಥೆ ಹೇಳಿಕೊಟ್ಟರು. ಒಂದರಿಂದ ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇದೇ ವೇಳೆ ಪುಸ್ತಕ ಪ್ರದರ್ಶನವೂ ಹಮ್ಮಿಕೊಳ್ಳಲಾಗಿತ್ತು. 26 ಸರ್ಕಾರಿ ಶಾಲೆಗಳ ಸುಮಾರು 900 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಶಿಕ್ಷಕ ವರ್ಗ

ಶಿಕ್ಷಕರ ಸ್ವಯಂ ವೇದಿಕೆಯ ವತಿಯಿಂದ ಶುಕ್ರವಾರ (ಸೆ.11) ಸರ್ಜಾಪುರದ ಬಾಲಕರ ಮಾದರಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 'ಓದುಗರಾಗಿ ಶಿಕ್ಷಕರು' ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ಬುಧವಾರ ನಗರದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕುಲಸಚಿವ ಗಿರಿಧರ್ ಅವರು ಉತ್ಸವಕ್ಕೆ ಚಾಲನೆ ನೀಡಿದ್ದರು.

ಮೊದಲ ದಿನ ನಡೆದ 'ಓದುಗರಾಗಿ ಶಿಕ್ಷಕರು' ಸಂವಾದ ಕಾರ್ಯಕ್ರಮದಲ್ಲಿ ಸರ್ಜಾಪುರ, ದೊಮ್ಮಸಂದ್ರ ಸೇರಿದಂತೆ ಇತರ ಭಾಗಗಳಿಂದ 33 ಸರ್ಕಾರಿ, 13 ಖಾಸಗಿ ಶಾಲೆ ಶಿಕ್ಷಕರು ಹಾಗೂ ಇತರ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದರು.